Karnatak Law Society's
**Vishwanathrao Deshpande Institute of Technology**
**(Approved by AICTE, New Delhi. Affiliated to VTU, Belagavi)**
**(Recognised Under Section 2(f) by UGC, New Delhi)**
**Udyog Vidya Nagar, Haliyal – 581329, Dist: Uttar Kannada (Karnataka)**
**Phone: 08284-220861, 220334, 221409, Fax: 08284-220813**
**www.klsvdit.edu.in** **principal@klsvdit.edu.in**

Date: 23-08-2022

**ಪತ್ರಿಕಾ ಪ್ರಕಟಣೆ:**

## ಪ್ರತಿಷ್ಠಿತ ಹೆಚ್.ಎ.ಎಲ್. ನ ತರಬೇತಿ ಪ್ರಕ್ರಿಯೆಗೆ ವಿ.ಡಿ.ಐ.ಟಿ. ವಿದ್ಯಾರ್ಥಿಗಳು ಆಯ್ಕೆ

ಕೆ.ಎಲ್.ಎಸ್. ವಿ.ಡಿ.ಐ.ಟಿ. ಹಳಿಯಾಳದ ಮೆಕ್ಯಾನಿಕಲ್ ವಿಭಾಗದ ಐದು ವಿದ್ಯಾರ್ಥಿಗಳು ಭಾರತದ ಪ್ರಖ್ಯಾತ ವೈಮಾನಿಕ ಸಂಸ್ಥೆಯಾದ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಹೆಚ್.ಎ.ಎಲ್)ನ ತರಬೇತಿ ಪ್ರಕ್ರಿಯೆಗೆ ಆಯ್ಕೆಯಾಗಿದ್ದಾರೆ. ಮೆಕ್ಯಾನಿಕಲ್ ವಿಭಾಗದ ಮೂರನೇ ವರ್ಷದ ವಿದ್ಯಾರ್ಥಿಗಳಾದ ಕು.ಪನ್ನಗರಾಜ್ ಪಿ, ಕು.ಅಕ್ಷಯ್ ಪಿ, ಕುಮಾರಿ.ಪ್ರತಿಕ್ಷಾ, ಕು.ಅತ್ರೇಯ ಡಿ, ಕು.ಅಕ್ಷಯ್ ಆರ್ ಎರಡು ವಾರಗಳ ಕಾಲ ಬೆಂಗಳೂರಿನ ಹೆಚ್.ಎ.ಎಲ್ ಸಂಸ್ಥೆಯಲ್ಲಿ ವಿಮಾನ ವ್ಯವಸ್ಥೆ, ವಿಮಾನ ಪರೀಕ್ಷೆ ಹಾಗೂ ವಿಮಾನ ತಯಾರಿಕೆ ವಿಷಯದ ಮೇಲೆ ತರಬೇತಿ ಪಡೆಯಲಿದ್ದಾರೆ.

ಮಹಾವಿದ್ಯಾಲಯದ ವಿದ್ಯಾರ್ಥಿಗಳು ಹೆಚ್.ಎ.ಎಲ್ ನ ತರಬೇತಿ ಪ್ರಕ್ರಿಯೆಗೆ ಆಯ್ಕೆಯಾಗಿರುವುದು ಹೆಮ್ಮೆಯ ವಿಷಯ ಎಂದು ಆಡಳಿತ ಮಂಡಳಿ ಅಧ್ಯಕ್ಷರಾದ ಶ್ರೀ ವಿನಾಯಕ ಲೋಕುರ ಅವರು ಹೇಳಿದರು. ಹೆಚ್.ಎ.ಎಲ್ ನೊಂದಿಗೆ ಮಹಾವಿದ್ಯಾಲಯವು ಒಡಂಬಡಿಕೆಯನ್ನು ಹೊಂದಿದ್ದು, ವಿದ್ಯಾರ್ಥಿಗಳಿಗೆ ತಾಂತ್ರಿಕ ಕ್ಷೇತ್ರದಲ್ಲಿ ಹೆಚ್ಚಿನ ಜ್ಞಾನ ಹೊಂದಲು ಉತ್ತೇಜಿಸುವ ಸಲುವಾಗಿ ತರಬೇತಿಯ ಶುಲ್ಕವನ್ನು ಮಹಾವಿದ್ಯಾಲಯವು ಭರಿಸಲಿದೆ ಎಂದು ಪ್ರಾಚಾರ್ಯ ಡಾ.ವಿ.ಎ. ಕುಲಕರ್ಣಿ ತಿಳಿಸಿದ್ದಾರೆ . ಮೆಕ್ಯಾನಿಕಲ್ ವಿಭಾಗದ ಮುಖ್ಯಸ್ಥರಾದ ಡಾ.ಕೆ.ಎಸ್.ಪೂಜಾರ್ ವಿದ್ಯಾರ್ಥಿಗಳು ಆಯ್ಕೆಯಾಗಿರುವುದಕ್ಕೆ ಹರ್ಷ ವ್ಯಕ್ತಪಡಿಸಿದರು. ಬೋಧಕ ಬೋಧಕೇತರ ಸಿಬ್ಬಂದಿಗಳು ವಿದ್ಯಾರ್ಥಿಗಳಿಗೆ ಶುಭಹಾರೈಸಿದ್ದಾರೆ.

ಪ್ರಾಂಶುಪಾಲರು

**Principal**
KLS Vishwanathrao Deshpande
Institute of Technology, Haliyal



ಪನ್ನಗ ರಾಜ್



ಅಕ್ಷಯ್ ಪಿ



ಅತ್ರೇಯ ಡಿ



ಪ್ರತಿಕ್ಷಾ



ಅಕ್ಷಯ್ ಆರ್